## 2017 ಕ.ತೀ.ವ 54

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

### ಶ್ರೀ ಮಾಧವ ಪ್ರಭು –ವಿರುದ್ಧ– ಶ್ರೀ ಸುಭಾಸ್ ಶೆಟ್ಟಿ ಮತ್ತು ಮತ್ತೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – 106ನೇ ಪ್ರಕರಣದೊಂದಿಗೆ ಓದಲಾದ ನಿಯಮ 1 (ಆರ್) ರ 43ನೇ ಕ್ರಮಾದೇಶ – ಸಿವಿಲ್ ಪ್ರಕ್ರಿಯಾ ಸಂಹಿತೆಯ 104(2)ನೇ ಪ್ರಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 104ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿದ ಅಪೀಲಿನಲ್ಲಿ ಆದೇಶವನ್ನು ಹೊರಡಿಸಲಾಗದಿದ್ದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ಹೊರಡಿಸಿದ ಆದೇಶದ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆಯ 1(ಆರ್) ನಿಯಮದ 43ನೇ ಕ್ರಮಾದೇಶದಡಿಯಲ್ಲಿ ಅಪೀಲನ್ನು ನಿಷೇಧಿಸಲಾಗುವುದಿಲ್ಲವೆಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಎದುರು ಇತ್ಯರ್ಥದಲ್ಲಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ನಿಯತ ಅಪೀಲಿನಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿ ಹೊರಡಿಸಿದ ವಾದಕಾಲೀನ ಕ್ರಮಾದೇಶದ ವಿರುದ್ಧ ಸಲ್ಲಿಸಿದ ಅಪೀಲು.

ಈ ಅಪೀಲಿನಲ್ಲಿ ಪ್ರಶ್ನಿಸಲಾಗಿರುವ ಕ್ರಮಾದೇಶವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿದ ನಿಯತ ಅಪೀಲಿನಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಹೊರಡಿಸಲಾಗಿರುವ ಆದೇಶವಾಗಿದೆಯೇ ಹೊರತು ಸಿವಿಲ್ ಪ್ರಕ್ರಿಯಾ ಸಂಹಿತೆಯ 104ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿರುವ ಅಪೀಲಾಗಿರುವುದಿಲ್ಲ. ಹಾಗಾಗಿ, ಈ ಅಪೀಲನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 104(2) ಪ್ರಕರಣದಡಿಯಲ್ಲಿ ನಿಷೇಧಿಸಲಾಗಿರುವುದಿಲ್ಲ.

ಆದಾಗ್ಯೂ, ಮೂಲ ದಾವೆಯ ವಸ್ತು ವಿಷಯದ ಮೌಲ್ಯವು 10,00,000/– ರೂಪಾಯಿಗಳನ್ನು ಮೀರುವುದಿಲ್ಲವೆಂದು ಹೇಳುವುದರಿಂದ, ಕರ್ನಾಟಕ ಸಿವಿಲ್

*ಸಂಕೀರ್ಣ ಮೊದಲನೇ ಅಪೀಲು ಸಂ. 292/2016 (ಸಿಪಿಸಿ), ದಿನಾಂಕ: 2ನೇ ಫೆಬ್ರವರಿ, 2016.

**ನ್ಯಾಯಾಲಯಗಳ ಅಧಿನಿಯಮ, 1964 (ಅಧಿನಿಯಮ)ರ 19ನೇ ಪ್ರಕರಣದ ದೃಷ್ಟಿಯಿಂದ ಅಧಿಕಾರ ವ್ಯಾಪ್ತಿಯಿರುವ ಜಿಲ್ಲಾ ನ್ಯಾಯಾಲಯದ ಎದುರು ಈ ಅಪೀಲನ್ನು ಅಪೀಲುದಾರನು ಹಾಜರುಪಡಿಸಲೇಬೇಕಾಗಿರುತ್ತದೆ – (1) ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 – 19ನೇ ಪ್ರಕರಣ – ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳಿಂದ ಬರುವ ಅಪೀಲುಗಳು – (2) ಸಿವಿಲ್ ಪ್ರಕ್ರಿಯಾ ಸಂಹಿತೆ. 1908 – 104ನೇ ಪ್ರಕರಣ – ಅಪೀಲುಗಳು ಉದ್ಭವಿಸುವಂಥ ಕ್ರಮಾದೇಶಗಳನ್ನು ಚರ್ಚಿಸಲಾಗಿದೆ. ಸಂಕೀರ್ಣ ಮೊದಲನೇ ಅಪೀಲನ್ನು ವಿಲೆ ಮಾಡಲಾಗಿದೆ.**

ಅರ್ಜಿದಾರರ ಪರ: ಶ್ರೀ ಎಸ್. ಕೃಷ್ಣಸ್ವಾಮಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್ (ಮೌಖಿಕ):**

1. ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ 1(ಆರ್)ರ ಕ್ರಮಾದೇಶ XLIIIಅಡಿಯಲ್ಲಿ ಹಾಜರುಪಡಿಸಿದ ಈ ಅಪೀಲಿನ ಊರ್ಜಿತತ್ವಕ್ಕೆ ಸಂಬಂಧಿಸಿದಂತೆ ರಿಜಿಸ್ಟರಿಯಿಂದ ಎತ್ತಲಾದ ಆಕ್ಷೇಪಣೆಗಳ ಮೇಲೆ ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ವಕೀಲರ ವಾದವನ್ನು ಆಲಿಸಿರುತ್ತೇವೆ.

2. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ ಇವರ ನ್ಯಾಯಾಲಯದ ಎದುರು ಇತ್ಯರ್ಥದಲ್ಲಿರುವ ನಿಯತ ಅಪೀಲು ಸಂ.43/2015ರಲ್ಲಿನ ಅಪೀಲುದಾರನು ಈ ಅಪೀಲನ್ನು ಹಾಜರುಪಡಿಸಿರುತ್ತಾನೆ. ಆರ್.ಎ.ಸಂಖ್ಯೆ 43/2015ರಲ್ಲಿನ ಅಪೀಲಿನಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿ ಇವನು ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂಖ್ಯೆ 5ನ್ನು ತಿರಸ್ಕರಿಸಿ ಮೇಲೆ ಹೇಳಿದ ನ್ಯಾಯಾಲಯದಿಂದ ಹೊರಡಿಸಿದ 05.12.2015ನೇ ದಿನಾಂಕದ ವಾದಕಾಲೀನ ಆದೇಶದ ವಿರುದ್ಧ ಈ ಅಪೀಲನ್ನು ನಿರ್ದೇಶಿಸಲಾಗಿರುತ್ತದೆ.

3. ನನ್ನ ಅಭಿಪ್ರಾಯದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 104(2)ನೇ ಪ್ರಕರಣವನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 104ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿದ ಅಪೀಲಿನಲ್ಲಿ ಹೊರಡಿಸಲಾಗದಿದ್ದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿನ ಅಧಿಕಾರವನ್ನು ಚಲಾಯಿಸಿ ಹೊರಡಿಸಿದ ಆದೇಶದ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆಯ 1(ಆರ್) ನಿಯಮದ 43ನೇ ಕ್ರಮಾದೇಶದಡಿಯಲ್ಲಿ ಅಪೀಲನ್ನು ನಿಷೇಧಿಸಲಾಗುವುದಿಲ್ಲ.

4. ಈ ಅಪೀಲಿನಲ್ಲಿ ಪ್ರಶ್ನಿಸಲಾಗಿರುವ ವಾದಕಾಲೀನ ಕ್ರಮಾದೇಶವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿದ ನಿಯತ ಅಪೀಲಿನಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಹೊರಡಿಸಲಾಗಿರುವ ಆದೇಶವಾಗಿದೆಯೇ ಹೊರತು ಸಿವಿಲ್ ಪ್ರಕ್ರಿಯಾ ಸಂಹಿತೆಯ 104ನೇ ಪ್ರಕರಣದಡಿಯಲ್ಲಿ ಹಾಜರುಪಡಿಸಿರುವ ಅಪೀಲಾಗಿರುವುದಿಲ್ಲ ಎಂದು ಹೇಳುವುದು ಸೂಕ್ತವಾಗಿರುತ್ತದೆ. ಹಾಗಾಗಿ, ಈ ಅಪೀಲನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 104(2) ಪ್ರಕರಣದಡಿಯಲ್ಲಿ ನಿಷೇಧಿಸಲಾಗಿರುವುದಿಲ್ಲ.

5. ಆದಾಗ್ಯೂ, ಮೂಲ ದಾವೆಯ ವಸ್ತು ವಿಷಯದ ಮೌಲ್ಯವು 10,00,000/– ರೂಪಾಯಿಗಳನ್ನು ಮೀರುವುದಿಲ್ಲವೆಂದು ಹೇಳುವುದರಿಂದ, ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 (ಅಧಿನಿಯಮ)ರ 19ನೇ ಪ್ರಕರಣದ ದೃಷ್ಟಿಯಿಂದ ಅಧಿಕಾರ ವ್ಯಾಪ್ತಿಯಿರುವ ಜಿಲ್ಲಾ ನ್ಯಾಯಾಲಯದ ಎದುರು ಈ ಅಪೀಲನ್ನು ಅಪೀಲುದಾರನು ಹಾಜರುಪಡಿಸಲೇ ಬೇಕಾಗಿರುತ್ತದೆ. ಅಧಿನಿಯಮದ 19 ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

> "**19: ಹಿರಿಯ ಸಿವಿಲ್ ನ್ಯಾಯಾಧೀಶರಿಂದ ಅರ್ಜಿಗಳು.**– ಕಾನೂನಿನ ಮೂಲಕ ಅಂಥ ಅಪೀಲುಗಳನ್ನು ಅಂಗೀಕರಿಸಿದಾಗ ಸಿವಿಲ್ ಸ್ವರೂಪದ ಮೂಲ ದಾವೆಗಳು ಮತ್ತು ವ್ಯವಹರಣೆಗಳಲ್ಲಿ

ಹಿರಿಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ ಡಿಕ್ರಿಗಳು ಮತ್ತು ಆದೇಶಗಳ ಮೂಲಕ.-

(1) ಮೂಲ ದಾವೆ ಅಥವಾ ವ್ಯವಹರಣೆಯ ವಸ್ತು-ವಿಷಯದ ಮೊಬಲಗು ಅಥವಾ ಮೌಲ್ಯವು ಹತ್ತು ಲಕ್ಷ ರೂಪಾಯಿಗಳನ್ನು ಮೀರದಿರುವಾಗ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು;

(2) ಇತರೆ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶ ಕಲ್ಪಿಸತಕ್ಕದ್ದು."

6. ಈ ಹಂತದಲ್ಲಿ, ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು, ಇಂದಿನಿಂದ ಆರು ತಿಂಗಳೊಳಗೆ ಅಧಿಕಾರ ವ್ಯಾಪ್ತಿಯಿರುವ ಜಿಲ್ಲಾ ನ್ಯಾಯಾಲಯದ ಮುಂದೆ ಅಪೀಲನ್ನು ಹಾಜರು ಪಡಿಸಲು ಅಪೀಲುದಾರನಿಗೆ ಅವನ ಸ್ವಾತಂತ್ರ್ಯದೊಂದಿಗೆ ಅಪೀಲು ಪತ್ರಗಳನ್ನು ಹಿಂದಿರುಗಿಸಲು ಕೋರಿರುತ್ತಾರೆ. ಕೋರಲಾದ ಅನುಮತಿ ಮತ್ತು ಸ್ವಾತಂತ್ರ್ಯವನ್ನು ನೀಡಲಾಗಿರುತ್ತದೆ. ರಿಜಿಸ್ಟ್ರಿಯು, ಇಂದಿನಿಂದ ಆರು ತಿಂಗಳೊಳಗೆ ಅಧಿಕಾರ ವ್ಯಾಪ್ತಿಯ ಜಿಲ್ಲಾ ನ್ಯಾಯಾಲಯದ ಮುಂದೆ ಅಪೀಲನ್ನು ಸಲ್ಲಿಸಲು ಅಪೀಲುದಾರನನ್ನು ಸಮರ್ಥಗೊಳಿಸಲು ಅಪೀಲುದಾರನ ವಕೀಲರಿಗೆ ಅಪೀಲು ಪತ್ರಗಳನ್ನು ಹಿಂದಿರುಗಿಸತಕ್ಕದ್ದು. ಅಪೀಲು ಮತ್ತು ಐ.ಎ.ಸಂಖ್ಯೆ 1/2016ನ್ನು ತದನುಸಾರವಾಗಿ ವಿಲೆ ಮಾಡಲು ತೀರ್ಮಾನಿಸಲಾಗಿದೆ.

ಅಪೀಲನ್ನು ವಿಲೆಗೊಳಿಸಲಾಗಿರುತ್ತದೆ.

---